ಓಃಎಸ್ಃನಂ.196/2019

ಪಿ.ಡಬ್ಲ್ಯೂ- 1

**ದಿನಾಂಕಃ 12-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ **ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಕೆ ಎಲ್ ವಿ **ವಕೀಲರಿಂದ**

ನನ್ನ ತಂದೆ ಗಿರಿಯಪ್ಪನವರು ದಿಃ 05-10-1987 ರಲ್ಲಿ ತೀರಿಕೊಂಡಿರುತ್ತಾರೆಂದರೆ ಸರಿ. ನನ್ನ ತಂದೆ ತೀರಿ ಹೋದ ನಂತರ ನನ್ನ ಚಿಕ್ಕಮ್ಮ ಗೌರಮ್ಮ ಮತ್ತು ನಾನು ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದೆವು ಎಂದರೆ ಸರಿ. ಗುಡ್ಡದಬೀರನಹಳ್ಳಿಯ ದಾವ ಸ್ವತ್ತಿನ ಐಟಂ ನಂ .1 ಸ್ವತ್ತು ನನ್ನ ತಂದೆಯವರು ಬಿಟ್ಟು ಹೋಗಿರುತ್ತಾರೆಂದರೆ ಸರಿ. ನನ್ನ ಮತ್ತು ನನ್ನ ಚಿಕ್ಕಮ್ಮನಾದ ಗೌರಮ್ಮ ಗುಡ್ಡದಬೀರನಹಳ್ಳಿಯ ಮನೆಯಲ್ಲಿ ಮದ್ಯದ ಭಾಗದಲ್ಲಿ ನನ್ನ ಚಿಕ್ಕಮ್ಮ, ಎಡಭಾಗದಲ್ಲಿ ನಾನು, ಬಲಭಾಗದಲ್ಲಿ ನಮ್ಮ ಅಣ್ಣ ಹಂಚಿಕೊಂಡು ವಾಸವಾಗಿದ್ದೆವು. ನನ್ನ ಚಿಕ್ಕಮ್ಮನಿಗೆ ಸರ್ವೆ ನಂ10/1 ಬಿ ನಲ್ಲಿ 3 ಎಕರೆಯಲ್ಲಿ 1 ಎಕರೆ 20 ಗುಂಟೆ ಅವರ ಜೀವನಾಂಶಕ್ಕಾಗಿ ನನ್ನ ತಂದೆ ತೀರಿ ಹೋದ ಮೇಲೆ ಬಿಟ್ಟಿರುವ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅದರಂತೆ ನನ್ನ ಚಿಕ್ಕಮ್ಮನಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ಅವರು ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 1 ಎಕರೆ 20 ಗುಂಟೆ ನಿಮ್ಮ ಚಿಕ್ಕಮ್ಮನಾದ ಗೌರಮ್ಮನ ಹೆಸರಿಗೆ ಖಾತೆ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.

ನಿಮ್ಮ ತಂದೆ ತೀರಿ ಹೋದ ನಂತರ ಎಂ ಆರ್ 4/91-92 ರಪ್ರಕಾರ 1 ಎಕರೆ ಜಮೀನು 2 ನೇ ಪ್ರತಿವಾದಿಯಾದ ವನಜಾಕ್ಷಮ್ಮ ಮತ್ತು 20 ಗುಂಟೆ ನಿಮ್ಮ ಹೆಸರಿಗೆ ಒಪ್ಪಿಗೆ ಮೇರೆಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ಅವರು ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯಾದ ಗೌರಮ್ಮನಿಗೆ ನೀಡಿದ 1 ಎಕರೆ 20 ಗುಂಟೆಯಲ್ಲಿ ಅವರು ಸ್ವಾಧೀನದಲ್ಲಿದ್ದು ಬೆಳೆ ಬೆಳೆಯುತ್ತಿದ್ದಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಗೌರಮ್ಮನವರು ಅವರಿಗೆ ಬಂದ 1 ಎಕರೆ 20 ಗುಂಟೆಯಲ್ಲಿ ಬೆಳೆ ಬೆಳೆದು ಅವರ ಹೆಣ್ಣು ಮಕ್ಕಳ ಮದುವೆ ಮಾಡಿ ಜೀವನ ಮಾಡುತ್ತಿರುತ್ತಾರೆಂದರೆ ಸಾಕ್ಷಿ ನಮಗೆ ಒಂದು ಮನೆಯನ್ನು ನೀಡಿ 3 ಎಕರೆಯನ್ನು ಅವರೇ ಇಟ್ಟುಕೊಂಡಿರುತ್ತಾರೆ, ನಮಗೆ 3 ಎಕರೆಯಲ್ಲಿ ಯಾವುದೇ ಭಾಗ ನೀಡಿರುವುದಿಲ್ಲ, ಪಹಣಿಯಲ್ಲಿ 20 ಗುಂಟೆ ನನ್ನ ಹೆಸರಿಗೆ ನಮೂದು ಆಗಿರುತ್ತದೆ ಎಂದು

ನುಡಿದಿರುತ್ತಾರೆ. ಗೌರಮ್ಮನವರಿಗೆ ಬಂದ 1 ಎಕರೆ 20 ಗುಂಟೆಯಲ್ಲಿ 2001 ನೇ ಇಸವಿಯಲ್ಲಿ ಅವರ ಮೂರು ಜನ ಹೆಣ್ಣುಮಕ್ಕಳಿಗೆ ನೊಂದಾಯಿತ ವಿಭಾಗ ಪತ್ರವನ್ನು ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಗೌರಮ್ಮನವರು ನಿಮ್ಮ ತಂದೆ ತೀರಿ ಹೋದ ನಂತರ 1 ಎಕರೆ 20 ಗುಂಟೆಯನ್ನು ಜೀವನಾಂಶಕ್ಕೆ ಪಡೆದಿದ್ದು, ಅದರಂತೆ ಅವರು ಸಂಪೂರ್ಣ ಮಾಲೀಕರಾಗಿ ಸ್ವಾಧೀನ ಹೊಂದಿರುತ್ತಾರೆಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವ ಸ್ವತ್ತಿನ ಬಿ ಷೆಡ್ಯೂಲ್ ಸ್ವತ್ತು 2001 ನೇ ಇಸವಿಯಲ್ಲಿ ಆದ ನೊಂದಾಯಿತ ವಿಭಾಗ ಪತ್ರದಂತೆ ವಿಜಯ ರವರ ಭಾಗಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 2001 ರಿಂದ ವಿಜಯಾರವರು ಬಿ ಷೆಡ್ಯೂಲ್ ನ ಆಸ್ತಿಯನ್ನು ಅಭಿವೃದ್ದಿ ಮಾಡಿ ಬೆಳೆ ಬೆಳೆಸಿಕೊಂಡು ಹೋದರು ಎಂದರೆ ಸಾಕ್ಷಿ ನಮ್ಮ ತಂದೆ ಮಾಡಿದ್ದನ್ನು ಅವರು ನೋಡಿಕೊಂಡು ಹೋಗಿರುತ್ತಾರೆ, ಅವರು ಸ್ವತ್ತನ್ನು ಅನುಭವಿಸುತ್ತಿರುವುದನ್ನು ನಾವು ಪ್ರಶ್ನೆ ಮಾಡಿರುವುದಿಲ್ಲ, ಅದನ್ನು ಮಾರಲು ಹೋದಾಗ ತಂಟೆ ತಕರಾರು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ವಿಭಾಗದಲ್ಲಿ ನಿಮಗೆ ಬಂದಂತಹ ಆಸ್ತಿಯಲ್ಲಿ ನೀವು ಮತ್ತು ವನಜಾಕ್ಷಿಯವರು ಒಟ್ಟಿಗೆ ಸ್ವಾಧೀನದಲ್ಲಿದ್ದು, ಮಾಡಿಕೊಂಡು ಹೋಗಿರುತ್ತೀರಾ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**